**ನಾನು ಕಂಡ ವಿವೇಕಾನಂದ**



ಡಾ.ಆರ್. ಬಾಲಸುಬ್ರಹ್ಮಣ್ಯಂ

# ಯಾರವರು... ಮಿತಿಗೆ ನಿಲುಕದವರು?

ಸ್ವಾಮಿ ವಿವೇಕಾನಂದರ ಬಗ್ಗೆ ಉಪನ್ಯಾಸ ನೀಡಲು ನನ್ನನ್ನು ಆಹ್ವಾನಿಸಿದಾಗಲೆಲ್ಲಾ ಬಹಳಷ್ಟು ಯುವಜನರು, ನಾನು ವಿವೇಕಾನಂದರಿಂದ ಆಕರ್ಷಿತನಾದದ್ದು ಹೇಗೆ ಮತ್ತು ಅವರ ಪ್ರಭಾವಿ ಚಿಂತನೆಗಳನ್ನು ಯಾವ ರೀತಿ ಅರ್ಥೈಸಿಕೊಂಡಿದ್ದೇನೆ ಎಂದು ನನ್ನನ್ನು ಕೇಳುತ್ತಾರೆ. ಸುಮಾರು ಮೂರು ದಶಕಗಳ ಹಿಂದೆ ಅಕಸ್ಮಾತ್ತಾಗಿ ಸ್ವಾಮೀಜಿ ಅವರ ಪರಿಚಯ ನನಗೆ ಆದಾಗಿನಿಂದಲೂ ಅವರನ್ನು, ಅವರ ಸಂದೇಶಗಳನ್ನು ಅರ್ಥ ಮಾಡಿಕೊಳ್ಳಲು ಮತ್ತು ಅಂತರ್ಗತ ಮಾಡಿಕೊಳ್ಳಲು ನಾನು ಪ್ರಯತ್ನಿಸುತ್ತಲೇ ಇದ್ದೇನೆ.

ಸ್ವಾಮೀಜಿ ನನಗೆ ಮೊದಲು ಪರಿಚಯವಾದದ್ದು ನನ್ನ ತಾರುಣ್ಯದ 17ನೇ ವರ್ಷದಲ್ಲಿ. ಆಗಷ್ಟೇ ದ್ವಿತೀಯ ಪಿಯುಸಿಯನ್ನು ಅತ್ಯುತ್ತಮ ಅಂಕಗಳೊಂದಿಗೆ ಮುಗಿಸಿದ್ದ ನಾನು ನನ್ನ ಆಯ್ಕೆಯ ಕಾಲೇಜಿಗೆ ಸೇರಿ, ನನಗಿಷ್ಟ ಬಂದ ಕೋರ್ಸನ್ನೇ ಆಯ್ದುಕೊಳ್ಳುವ ಬಗ್ಗೆ ಆತ್ಮವಿಶ್ವಾಸ ಹೊಂದಿದ್ದೆ. ಆದರೆ ವಿಧಿ ನನಗಾಗಿ ಬೇರೆಯದೇ ಯೋಜನೆ ಹೆಣೆದಿತ್ತು. ಇದು ನನ್ನನ್ನು ಹತಾಶನನ್ನಾಗಿಸಿತ್ತು. ಬೆಂಗಳೂರಿನ ಬಿಎಂಎಸ್ ಕಾಲೇಜಿನಲ್ಲಿ ನನಗೆ ಎಂಜಿನಿಯರಿಂಗ್ ಸೀಟ್ ಸಿಕ್ಕಿತ್ತು. ಮೊದಲ ದಿನ ಸಾಕಷ್ಟು ಹಿಂಜರಿಕೆಯಿಂದಲೇ ಕಾಲೇಜಿಗೆ ತೆರಳಿದ್ದೆ. ಆ ದಿನ ಅತ್ಯಂತ ಹೀನಾಯವಾದ ರ್‍ಯಾಗಿಂಗ್‌ಗೆ ನಾನು ಒಳಗಾಗಿದ್ದೆ. ಈಗ ಹಾಗೆ ಆಗಿದ್ದು ನಿಜಕ್ಕೂ ಒಳ್ಳೆಯದೇ ಆಯಿತು ಎನಿಸುತ್ತದೆ. ಆದರೆ ಆಗ ರ್‍ಯಾಗಿಂಗ್ ನನ್ನ ಮೇಲೆ ಎಷ್ಟು ಪರಿಣಾಮ ಬೀರಿತ್ತೆಂದರೆ, ಮರುದಿನ ಕಾಲೇಜಿಗೆ ಹೋಗುವ ಧೈರ್ಯವೇ ನನ್ನಲ್ಲಿ ಉಳಿದಿರಲಿಲ್ಲ. ಅಪ್ಪಟ ಮಧ್ಯಮ ವರ್ಗದ ಕುಟುಂಬದಿಂದ ಬಂದಿದ್ದ ನನ್ನ ಮುಂದೆ ಹೆಚ್ಚಿನ ಆಯ್ಕೆಗಳಿರಲಿಲ್ಲ. ಸುರಕ್ಷಿತವಾದ, ಆದರೆ ದುಬಾರಿಯಲ್ಲದ ಜಾಗವೊಂದರಲ್ಲಿ ನಾನು ಆಶ್ರಯ ಪಡೆಯಬೇಕಾಗಿತ್ತು. ನನ್ನ ಅದೃಷ್ಟಕ್ಕೆ ಬಸವನಗುಡಿಯಲ್ಲಿರುವ ರಾಮಕೃಷ್ಣ ಆಶ್ರಮವು ಬಿಎಂಎಸ್ ಕಾಲೇಜಿಗೆ ಸಮೀಪದಲ್ಲೇ ಇದೆ. ಮುಂದಿನ ಎರಡು ತಿಂಗಳ ಮಟ್ಟಿಗೆ ಅದೇ ನನ್ನ ಮನೆಯಾಯಿತು.

ಆಶ್ರಮದ ಸನ್ಯಾಸಿಗಳು ನನಗೆ ತೋರುತ್ತಿದ್ದ ಪ್ರೀತಿ ಮತ್ತು ನೀಡುತ್ತಿದ್ದ ಆಹಾರಕ್ಕೆ ನ್ಯಾಯ ಒದಗಿಸಬೇಕೆಂಬ ಭಾವದಿಂದ ನಾನು ಯಾವಾಗಲೂ ಅಲ್ಲಿನ ಗ್ರಂಥಾಲಯಕ್ಕೆ ಭೇಟಿ ನೀಡಲು ಆರಂಭಿಸಿದೆ. ಈ ಎರಡು ತಿಂಗಳುಗಳಲ್ಲಿ ಸ್ವಾಮಿ ವಿವೇಕಾನಂದರ ಸಮಗ್ರ ಕೃತಿಗಳನ್ನು ಓದಿ ಮುಗಿಸಿದೆ. ಆ ಸಂದರ್ಭದಲ್ಲಿ ಓದುವುದು ಬಿಟ್ಟು ಬೇರೇನನ್ನೂ ಮಾಡಿರಲಿಲ್ಲ. ಆಗ ನನಗೆ ಸ್ವಾಮೀಜಿ ಪುಸ್ತಕಗಳಲ್ಲಿ ಏನು ಹೇಳಿದ್ದಾರೆ ಎಂಬುದರ ತಳ ಬುಡ ಸಹ ಅರ್ಥ ಆಗಿರಲಿಲ್ಲ. ಆದರೆ ಅದು ಅವರು ನನ್ನ ಒಳ ಪ್ರವೇಶಿಸಲು ಹೃದಯದ ಬಾಗಿಲನ್ನು ತೆರೆದುಕೊಟ್ಟಂತೆ ಆಯಿತು. ನಂತರ ನಡೆದದ್ದೆಲ್ಲವೂ ಸ್ವಾಮಿ ವಿವೇಕಾನಂದ ಎಂಬ ಅಸಾಧಾರಣವಾದ ಒಂದು ಪ್ರಕ್ರಿಯೆ ಎಂದೇ ಹೇಳಬಹುದು. ಅವರ ಎರಡು ಪುಸ್ತಕಗಳಾದ 'ಹಿಸ್ ಕಾಲ್ ಟು ದಿ ನೇಷನ್' ಮತ್ತು 'ಟು ದಿ ಯೂಥ್ ಆಫ್ ಇಂಡಿಯಾ' ನನ್ನ ಜೀವನವನ್ನೇ ಬದಲಿಸಿದವು. ಎರಡು ವರ್ಷಗಳ ತರುವಾಯ, ಅಂದರೆ 1984ರಲ್ಲಿ ವೈದ್ಯಕೀಯ ವಿದ್ಯಾರ್ಥಿಯಾಗಿದ್ದ ನಾನು ಸ್ವಾಮಿ ವಿವೇಕಾನಂದ ಯುವ ಚಳವಳಿಯನ್ನು ಹುಟ್ಟುಹಾಕಲು ಪ್ರಮುಖ ಕಾರಣಕರ್ತನಾದೆ.

30 ವರ್ಷಗಳ ಈ ಹಾದಿಯಲ್ಲಿ ವಿವೇಕಾನಂದರನ್ನು ನೋಡುವ ಬಗೆ ಮತ್ತು ಅವರನ್ನು ಅರ್ಥೈಸಿಕೊಳ್ಳುವ ರೀತಿ ಹೇಗಿದೆ ಎಂದು ಕೇಳಿದರೆ, ಸಿಹಿ ತಿನ್ನುತ್ತಿರುವವರನ್ನು ಆ ಸಿಹಿಯ ಪ್ರಮಾಣ ಎಷ್ಟಿದೆ ಎಂದು ವರ್ಣಿಸಿ ಎಂದಂತೆ ಆಗುತ್ತದಷ್ಟೆ. ಅವರ್ಣನೀಯವಾದುದನ್ನು ವರ್ಣಿಸಲು ಭಾಷೆ ಮತ್ತು ಪದಗಳು ಎಷ್ಟಿದ್ದರೂ ಸಾಲುವುದಿಲ್ಲ. ವಿವೇಕಾನಂದರನ್ನು ವ್ಯಾಖ್ಯಾನಿಸಲಾಗಲೀ, ವರ್ಣಿಸಲಾಗಲೀ ಅಸಾಧ್ಯ. ಏನಿದ್ದರೂ ಅವರನ್ನು ಅನುಭವಿಸಬೇಕಷ್ಟೇ. ಯಾರಾದರೂ ಅವರನ್ನು ಅವರೊಬ್ಬ ಕೇವಲ ಮನುಷ್ಯ ಎಂದಾಗಲೀ, ದೇವದೂತ, ಸಂತ ಅಥವಾ ಪ್ರಭಾವಿ ವ್ಯಕ್ತಿ ಎಂದಾಗಲೀ ಹೇಳಲು ಸಾಧ್ಯವೇ? ಹಲವಾರು ಜನರು ಅವರನ್ನು ಹಲವಾರು ರೀತಿಯಲ್ಲಿ ಅರ್ಥ ಮಾಡಿಕೊಳ್ಳುತ್ತಾರೆ. ಹಾಗಾಗಿ ಅವರನ್ನು ಯಾರು ಹೇಗೇ ವರ್ಣಿಸಿದರೂ ಅದು ಸೀಮಿತ ಎಂದೇ ಅನಿಸುತ್ತದೆ. ನಾನು ಮೊದಲು ಭಾವಿಸಿದ್ದಂತೆ ಅವರು ಸಮಾಜ ಸುಧಾರಕರೇ? ನಂತರ ನನ್ನ ಅನುಭವಕ್ಕೆ ಬಂದಂತೆ ಮಾನವತಾವಾದಿಯೇ? ಅಥವಾ ಅತ್ಯುತ್ಕೃಷ್ಟ ಸಂಸ್ಥೆಗಳನ್ನು ಹುಟ್ಟುಹಾಕಿದ ವ್ಯವಸ್ಥಾಪಕನೇ? ನಾಯಕತ್ವಕ್ಕೆ ಅನ್ವರ್ಥವಾಗಿ ಬದುಕಿದ ನಾಯಕನೇ? ಸನಾತನ ಧರ್ಮ ಮತ್ತು ಅಧ್ಯಾತ್ಮವನ್ನು ಒಳಗೊಂಡ ನಡೆದಾಡುವ ವಿಶ್ವಕೋಶವೇ?, ಭಾರತದ ಒಬ್ಬ ಪರಿಪೂರ್ಣ ಪ್ರತಿನಿಧಿಯೇ? ಸನ್ಯಾಸಿಯೇ ಅಥವಾ ಸ್ವಯಂ ದೇವರೇ?

ಸ್ವಾಮೀಜಿಯನ್ನು ವಿವರಿಸಿ ಎಂದು ಯಾರನ್ನಾದರೂ ಕೇಳುವುದು ಅನನುಭವಿಯನ್ನು ಕಾಲ, ಅವಕಾಶ ಹಾಗೂ ಕಾರ್ಯಕಾರಣವನ್ನು ವರ್ಣಿಸಲು ಕೇಳಿದಂತೆ. ನಾವು ನಮಗೇನು ಕಾಣಿಸುತ್ತಿದೆ ಎಂದು ಯೋಚಿಸುತ್ತೇವೆಯೋ ಅದಷ್ಟೇ ಅಂತಿಮ ಎಂದುಕೊಂಡರೆ ಅವರನ್ನು ಸೀಮಿತಗೊಳಿಸಿದಂತೆ ಆಗುತ್ತದೆ. ನನ್ನ ಪಾಲಿಗೆ ಸ್ವಾಮೀಜಿ ಇವೆಲ್ಲವೂ ಮತ್ತು ಇವೆಲ್ಲಕ್ಕಿಂತ ಮಿಗಿಲಾದವರೂ ಆಗಿದ್ದಾರೆ. ಅವರೊಂದು ಶಕ್ತಿ, ಅವರು ಮಾನವ ಅಸ್ತಿತ್ವದ ಉದ್ದೇಶಕ್ಕೇ ಅರ್ಥ ನೀಡುವ ಒಂದು ಪರಿಕಲ್ಪನೆ. ನಮ್ಮ ಏಕತಾನತೆಯ ಅಸ್ತಿತ್ವಕ್ಕೆ ಏನಾದರೂ ಅರ್ಥ ಕೊಡುವ ಪ್ರಯತ್ನಕ್ಕೆ ಹೊರಟಾಗ ಮಾತ್ರ ನಾವು ಅವರನ್ನು ಅನುಭವಿಸಲು ಸಾಧ್ಯ. ಸ್ವಾಮೀಜಿಯವರ ಅನುಭವಜನ್ಯ ಸಂದೇಶಗಳು ಕಾಲಾತೀತ, ಅನಂತ, ಅಪರಿಮಿತ, ಸಾರ್ವಕಾಲಿಕ ಪ್ರಸ್ತುತವಾದವು ಮತ್ತು ಎಂದೆಂದಿಗೂ ಪ್ರಯೋಗಶೀಲವಾದವು. ಈ ಪರಿಕಲ್ಪನೆಯನ್ನು ಭೌಗೋಳಿಕ ಮಿತಿಗಾಗಲೀ ಅಥವಾ ಮನುಷ್ಯನ ಮನಸ್ಸಿಗೆ ನಿಲುಕುವ ಇತರ ಚೌಕಟ್ಟಿಗಾಗಲೀ ಒಳಪಡಿಸಲು ಸಾಧ್ಯವಿಲ್ಲ. ಈ ಒಂದು ಶಕ್ತಿಯ ತೀವ್ರತೆಯನ್ನು ಸ್ವಾಮಿ ವಿವೇಕಾನಂದರಿಗೆ ಸಂಪೂರ್ಣವಾಗಿ ಶರಣಾಗುವ ಮೂಲಕ ಮಾತ್ರ ನಾವು ಪರಿಭಾವಿಸಲು ಸಾಧ್ಯ. ◆